**ಕರ್ನಾಟಕ ಸರ್ಕಾರ**

# ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ

# ವಾರ್ಷಿಕ ವರದಿ

## ದಿನಾಂಕ:– 01–04–2016 ರಿಂದ 31–03–2017 ರವರೆಗೆ

## (ಏಪ್ರಿಲ್–2016 ರಿಂದ ಮಾರ್ಚ್–2017)


Karnataka State Fire & Emergency Services
FIRE
VOLVO
RESCUE VAN
KARNATAKA STATE FIRE AND EMERGENCY SERVICES

## ಪೀಠಿಕೆ

ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯನ್ನು 1942 ರಲ್ಲಿ ಬೆಂಗಳೂರು ದಕ್ಷಿಣ ಮತ್ತು ಉತ್ತರ ಎಂಬ ಎರಡು ಠಾಣೆಗಳನ್ನಾಗಿ ಪೊಲೀಸ್ ಇಲಾಖೆಯ ಆಡಳಿತ ಮತ್ತು ನಿಯಂತ್ರಣದಲ್ಲಿ ಪ್ರಥಮ ಬಾರಿಗೆ ಸ್ಥಾಪಿಸಲಾಯಿತು. ತದನಂತರ ರಾಜ್ಯಗಳ ಪುನರ್ ರಚನಾ ಸಮಯದಲ್ಲಿ ಹೆಚ್ಚಿನ ಅಗ್ನಿಶಾಮಕ ಠಾಣೆಗಳನ್ನು ಬಳ್ಳಾರಿ, ಹೊಸಪೇಟೆ, ಮಂಗಳೂರು, ಉಡುಪಿ ಮತ್ತು ರಾಯಚೂರು ಮುಂತಾದ ಸ್ಥಳಗಳಲ್ಲಿ ಪ್ರಾರಂಭಿಸಲಾಯಿತು. ಈ ರೀತಿಯಾಗಿ ಅಗ್ನಿಶಾಮಕ ಸೇವೆ ಇಲಾಖೆಯ ಕರ್ತವ್ಯವು ಪೊಲೀಸ್ ಇಲಾಖೆಯ ಆಡಳಿತ ನಿಯಂತ್ರಣದಲ್ಲಿ ಕರ್ನಾಟಕ ರಾಜ್ಯ ಅಗ್ನಿಶಾಮಕ ಸೇವೆ ಅಧಿನಿಯಮ 1964ರಲ್ಲಿ ಜಾರಿಗೆ ಬರುವವರೆಗೂ ಮುಂದುವರಿಯಿತು. ಈ ಅಧಿನಿಯಮದ ಉಪಖಂಡಗಳಂತೆ ಅಗ್ನಿಶಾಮಕ ಮತ್ತು ತುರ್ತು ಸೇವಾ ನಿರ್ದೇಶನಾಲಯವನ್ನು 05–11–1965ರಲ್ಲಿ ಸೃಷ್ಟಿಸಲಾಯಿತು. ಅಂದಿನಿಂದ ಈ ಇಲಾಖೆಯು ಮಹಾನಿರ್ದೇಶಕರು, ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ಇವರ ಆಡಳಿತ ನಿಯಂತ್ರಣದಲ್ಲಿ ಕರ್ತವ್ಯ ನಿರ್ವಹಿಸುತ್ತಿದೆ. ಈ ಹುದ್ದೆಗೆ ಪೊಲೀಸ್ ಮಹಾ ನಿರ್ದೇಶಕರ ಶ್ರೇಣಿಯ ಅಧಿಕಾರಿಯವರನ್ನು ನಿಯೋಜಿಸಲಾಗುತ್ತಿದೆ. ಈ ಹುದ್ದೆಯಲ್ಲಿರುವ ಅಧಿಕಾರಿಯವರು ಗೃಹ ರಕ್ಷದ ದಳದ ಮಹಾ ಸಮಾದೇಷ್ಠರಾಗಿ ಹಾಗೂ ಪದನಿಮಿತ್ತ ನಿರ್ದೇಶಕರು, ಪೌರರಕ್ಷಣೆ ಇಲಾಖೆ ಮತ್ತು ಎಸ್‌ಡಿಆರ್‌ಎಫ್ ಮಹಾ ನಿರ್ದೇಶಕರ ಕರ್ತವ್ಯಗಳನ್ನು ಸಹ ನಿರ್ವಹಿಸುತ್ತಿದ್ದಾರೆ.

**ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಮಹಾ ನಿರ್ದೇಶಕರವರಿಗೆ ಈ ಕೆಳಕಾಣಿಸಿದ ಅಧಿಕಾರಿಗಳು ದೈನಂದಿನ ಆಡಳಿತಾತ್ಮಕ ಮತ್ತು ತಾಂತ್ರಿಕ ವಿಷಯಗಳ ನಿರ್ವಹಣೆಗೆ ನೆರವಾಗುತ್ತಾರೆ.**

1) ಆರಕ್ಷಕ ಮಹಾ ನಿರೀಕ್ಷಕರು ಮತ್ತು ಹೆಚ್ಚುವರಿ ಮಹಾ ನಿರ್ದೇಶಕರು – ಪೋಲೀಸ್ ಇಲಾಖೆಯಿಂದ ನಿಯೋಜನೆ
2) ಆರಕ್ಷಕ ಉಪ ಮಹಾನಿರೀಕ್ಷಕರು – ಪೋಲೀಸ್ ಇಲಾಖೆಯಿಂದ ನಿಯೋಜನೆ
3) ನಿರ್ದೇಶಕರು – ಇಲಾಖೆಯ ಅಧಿಕಾರಿ
4) ಉಪ ನಿರ್ದೇಶಕರು(ತಾಂತ್ರಿಕ) – ಇಲಾಖೆಯ ಅಧಿಕಾರಿ
5) ಉಪ ನಿರ್ದೇಶಕರು(ಆಡಳಿತ) – ಇಲಾಖೆಯ ಅಧಿಕಾರಿ
6) ಉಪ ನಿರ್ದೇಶಕರು(ಅಗ್ನಿನಿಯಂತ್ರಣ)–ಇಲಾಖೆಯ ಅಧಿಕಾರಿ
7) ಆಡಳಿತಾಧಿಕಾರಿ – ಇಲಾಖೆಯ ಅಧಿಕಾರಿ
8) ಸಹಾಯಕ ನಿಯಂತ್ರಕರು(ಲೆಕ್ಕ ಪತ್ರ)–ಕರ್ನಾಟಕ ರಾಜ್ಯ ಲೆಕ್ಕ ಪತ್ರ ಇಲಾಖೆಯಿಂದ ನಿಯೋಜನೆ.

**ಇಲಾಖೆಯ ದೈನಂದಿನ ಕಾರ್ಯ ಚಟುವಟಿಕೆಗಳನ್ನು ಈ ಕೆಳಗಿನ ಗುಂಪುಗಳನ್ನಾಗಿ ವಿಂಗಡಿಸಲಾಗಿದೆ.**
**ಅ) ಕಾರ್ಯಚರಣೆ ಆ) ತರಬೇತಿ ಇ) ನಿರ್ವಹಣೆ ಮತ್ತು ಈ) ಸಂಪರ್ಕ**

**ಅ)ಕಾರ್ಯಾಚರಣೆ–** ಈ ಉಪ ಗುಂಪಿಗೆ 6 ಮುಖ್ಯ ಅಗ್ನಿಶಾಮಕ ಅಧಿಕಾರಿಗಳು ಮುಖ್ಯಸ್ಥರಾಗಿರುತ್ತಾರೆ. ಬೆಂಗಳೂರಿನಲ್ಲಿ ಎರಡು, ಹುಬ್ಬಳ್ಳಿಯಲ್ಲಿ, ಕಲಬುರಗಿಯಲ್ಲಿ, ಮಂಗಳೂರಿನಲ್ಲಿ ಹಾಗೂ ಮೈಸೂರಿನಲ್ಲಿ ತಲಾ ಒಂದೊಂದು ಮುಖ್ಯ ಅಗ್ನಿಶಾಮಕ ಅಧಿಕಾರಿ ಹುದ್ದೆಗಳು ಇರುತ್ತವೆ. ಪ್ರತಿ ಮುಖ್ಯ ಅಗ್ನಿಶಾಮಕ ಅಧಿಕಾರಿಯ ನಿಯಂತ್ರಣದಲ್ಲಿ 2 ರಿಂದ ನಾಲ್ಕು ವಲಯಗಳು ಕಾರ್ಯ ನಿರ್ವಹಿಸುತ್ತವೆ. ಬೆಂಗಳೂರಿನ ನಾಲ್ಕು ವಲಯಗಳು, ಮೈಸೂರು, ದಾವಣಗೆರೆ, ಮಂಗಳೂರು, ಶಿವಮೊಗ್ಗ, ಹುಬ್ಬಳ್ಳಿ, ಬಳ್ಳಾರಿ ಮತ್ತು ಕಲಬುರಗಿಯ ಪ್ರತಿಯೊಂದು ವಲಯದಲ್ಲಿ ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿಯವರ ಮೇಲ್ವಿಚಾರಣೆಯಲ್ಲಿ ವಲಯಗಳು ಕಾರ್ಯ ನಿರ್ವಹಿಸುತ್ತಿವೆ. ಒಬ್ಬ ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿಯವರ ನಿಯಂತ್ರಣದಲ್ಲಿ 3 ರಿಂದ 4 ಜಿಲ್ಲೆಗಳು ಬರುತ್ತವೆ.

ಪ್ರತಿಯೊಂದು ಜಿಲ್ಲೆಗೂ ಒಬ್ಬರು ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಇದ್ದು, ಅವರ ಅಧೀನದಲ್ಲಿ 3 ರಿಂದ 8 ಅಗ್ನಿಶಾಮಕ ಠಾಣೆಗಳು ಕಾರ್ಯನಿರ್ವಹಿಸುತ್ತಿವೆ. ಪ್ರಸ್ತುತ 212 ಅಗ್ನಿಶಾಮಕ ಠಾಣೆಗಳು ಮತ್ತು 5 ಅಗ್ನಿ ನಿಯಂತ್ರಣ ಘಟಕಗಳಾದ (ವಿಧಾನ ಸೌಧ, ರಾಜಭವನ, ಎಂ.ಎಸ್.ಕಟ್ಟಡ, ಹೈಕೋರ್ಟ್ ಹಾಗೂ ವಿ.ವಿ.ಟವರ್ ಕಟ್ಟಡಗಳಲ್ಲಿ) ಕಾರ್ಯ ನಿರ್ವಹಿಸುತ್ತಿವೆ. ರಾಜ್ಯದ 30 ಜಿಲ್ಲೆಗಳಲ್ಲಿ 174 ತಾಲ್ಲೂಕುಗಳು ಹಾಗೂ 14 ಹೊಬಳಿಗಳಲ್ಲಿ ಅಗ್ನಿಶಾಮಕ ಠಾಣೆ ಕಾರ್ಯ ನಿರ್ವಹಿಸುತ್ತಿವೆ. ಕಾರ್ಯ ನಿರ್ವಹಿಸುತ್ತಿರುವ 212 ಅಗ್ನಿಶಾಮಕ ಠಾಣೆಗಳ ಪೈಕಿ 14 ಅಗ್ನಿಶಾಮಕ ಠಾಣೆಗಳು ತಾಲ್ಲೂಕು ಕೇಂದ್ರದಿಂದ ದೂರವಿರುವ ಹೋಬಳಿ ಮಟ್ಟದಲ್ಲಿ ಇರುತ್ತದೆ. ಮತ್ತು 24 ಅಗ್ನಿಶಾಮಕ ಠಾಣೆಗಳು ಪ್ರಮುಖ ನಗರಗಳಾದ ಬೆಂಗಳೂರು(20), ಮೈಸೂರು(3), ಮಂಗಳೂರು(2), ಬೆಳಗಾವಿ(1), ಉಡುಪಿ(1) ಮತ್ತು ಹುಬ್ಬಳ್ಳಿ(3) ಗಳಲ್ಲಿ ಒಂದಕ್ಕಿಂತ ಹೆಚ್ಚು ಅಗ್ನಿಶಾಮಕ ಠಾಣೆಗಳು ಕಾರ್ಯ ನಿರ್ವಹಿಸುತ್ತಿವೆ.

**ಅಗ್ನಿಶಾಮಕ ಠಾಣೆಗಳ ಕಾರ್ಯ ನಿರ್ವಹಣೆ**

ಬೆಂಗಳೂರು ನಗರದಲ್ಲಿ 12 ಅಗ್ನಿಶಾಮಕ ಠಾಣೆಗಳು 3 ಪಾಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಉಳಿದ ಸ್ಥಳಗಳಲ್ಲಿರುವ 176 ಅಗ್ನಿಶಾಮಕ ಠಾಣೆಗಳು 2 ಪಾಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿವೆ. ಇದಲ್ಲದೇ ರಾಜ್ಯದ ಮಹಾನಗರ ಪಾಲಿಕೆಗಳಾದ ಬೆಂಗಳೂರು ನಗರ(8) ಅಗ್ನಿಶಾಮಕ ಠಾಣೆ ಮತ್ತು (5) ಅಗ್ನಿ ನಿಯಂತ್ರಣ ಘಟಕಗಳು, ಬೆಂಗಳೂರು ಗ್ರಾಮಾಂತರ(1), ಮೈಸೂರು(3), ಮಂಗಳೂರು(2), ವಿಜಯಪುರ(1), ತುಮಕೂರು(1), ಹುಬ್ಬಳ್ಳಿ(3), ಬೆಳಗಾವಿ(1), ಬಳ್ಳಾರಿ(1), ಕಲಬುರಗಿ(1), ಶಿವಮೊಗ್ಗ(1) ಮತ್ತು ದಾವಣಗೆರೆ(1)ಗಳಲ್ಲಿನ 15 ಅಗ್ನಿಶಾಮಕ ಠಾಣೆಗಳು 3 ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಲು ಸರ್ಕಾರವು ಆದೇಶ ಸಂಖ್ಯೆ:ಒಇ 144 ಕಅಸೇ 2012 ದಿನಾಂಕ: 02-02-2014 ರಲ್ಲಿ ಮಂಜೂರಾತಿ ನೀಡಿದೆ. ಈ ಸ್ಥಳಗಳಲ್ಲಿ 3 ಪಾಳಿ ಪದ್ಧತಿಯನ್ನು ಇಲಾಖೆಯಲ್ಲಿ ನೇಮಕಾತಿಯಾಗಿ ಸಿಬ್ಬಂದಿಗಳು ಭರ್ತಿ ಹೊಂದಿದ ನಂತರ ಕಾರ್ಯ ನಿರ್ವಹಣೆ ಮಾಡಲಾಗುವುದು.

3 ಪಾಳಿ ಪದ್ಧತಿಯ ಕಾರ್ಯ ನಿರ್ವಹಣೆ: ಸಮಯ ಬೆಳಿಗ್ಗೆ 7 ಘಂಟೆಯಿಂದ ಮಧ್ಯಾಹ್ನ 2 ಘಂಟೆವರೆಗೆ ಹಾಗೂ ಮಧ್ಯಾಹ್ನ 2 ರಿಂದ ರಾತ್ರಿ 9 ರವರೆಗೆ ಹಾಗೂ ರಾತ್ರಿ 9 ರಿಂದ ಬೆಳ್ಳಿಗ್ಗೆ 7 ರವರೆಗೆ.

2 ಪಾಳಿ ಪದ್ಧತಿಯ ಕಾರ್ಯ ನಿರ್ವಹಣೆ: ಸಮಯ ಬೆಳಿಗ್ಗೆ 8 ಘಂಟೆಯಿಂದ ಸಂಜೆ 5 ಘಂಟೆವರೆಗೆ ಹಾಗೂ ಸಂಜೆ 5 ಘಂಟೆಯಿಂದ ಬೆಳಿಗ್ಗೆ 8 ರ ವರೆಗೆ.

**ಆ)ತರಬೇತಿ**: ಇಲಾಖೆಯು ರಾಜ್ಯ ಮಟ್ಟದಲ್ಲಿ ಆರ್.ಎ.ಮುಂಡ್ಕೂರ್ ಅಗ್ನಿಶಾಮಕ ತುರ್ತು ಸೇವಾ ಅಕಾಡೆಮಿಯು ಬನ್ನೇರುಘಟ್ಟ ರಸ್ತೆ, ಬೆಂಗಳೂರು, ಇಲ್ಲಿ ದಿನಾಂಕ 02-11-1970 ರಿಂದ ಹೊಂದಿದ್ದು, ಈ ಮಹಾ ವಿದ್ಯಾಲಯದಲ್ಲಿ ಇಲಾಖೆಗೆ ಹೊಸದಾಗಿ ನೇಮಕವಾಗುವ ಸಿಬ್ಬಂದಿಗಳಿಗೆ ಮತ್ತು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಹಾಗೂ ಬೇರೆ ಇಲಾಖೆಯ ಸಿಬ್ಬಂದಿಗಳಿಗೆ ತರಬೇತಿ ನೀಡಲಾಗುತ್ತಿದೆ. ಈ ಮಹಾ ವಿದ್ಯಾಲಯ 180 ರಿಂದ 200 ಸಿಬ್ಬಂದಿಗಳಿಗೆ ತರಬೇತಿ ನೀಡಲು ಸಾಕಾಗುವಷ್ಟು ವಸತಿ ಸೌಲಭ್ಯವನ್ನು ಹೊಂದಿರುತ್ತದೆ.

ಸಾಂಪ್ರದಾಯಿಕವಾದ ತರಬೇತಿ ಕಾರ್ಯಕ್ರಮಗಳಲ್ಲದೆ ಫೈರ್ ಕಮಾಂಡೊ ತರಬೇತಿ ಮತ್ತು ಬ್ರೀಥಿಂಗ್ ಆಪರೇಟಸ್ ಗ್ಯಾಲರಿ (ಪ್ರಾಯೋಗಿಕ) ತರಬೇತಿಗಳನ್ನು ಇಲಾಖೆಯು ಆಯೋಜಿಸುತ್ತಿದೆ. ಈ ಕೆಳಗಿನ ತರಬೇತಿ ಕಾರ್ಯಕ್ರಮಗಳನ್ನು ನಿಯಮಿತವಾಗಿ ತರಬೇತಿ ಅಕಾಡೆಮಿಯಲ್ಲಿ ನೀಡಲಾಗುತ್ತಿವೆ.

(1) ಹೊಸದಾಗಿ ನೇಮಕಗೊಂಡ ಅಗ್ನಿಶಾಮಕ ಠಾಣಾಧಿಕಾರಿ ಹಾಗೂ ಅಗ್ನಿಶಾಮಕರಿಗೆ 6 ತಿಂಗಳ ಬುನಾದಿ ತರಬೇತಿ,
(2) ಹೊಸದಾಗಿ ನೇಮಕಗೊಂಡ ಅಗ್ನಿಶಾಮಕ ಚಾಲಕರು ಹಾಗೂ ಚಾಲಕ ತಂತ್ರಜ್ಞರುಗಳಿಗೆ 4 ತಿಂಗಳ ಬುನಾದಿ ತರಬೇತಿ ಮತ್ತು 3 ತಿಂಗಳ ಬುನಾದಿ ತರಬೇತಿ ಅಗ್ನಿಶಾಮಕ ಕಾರ್ಯಗಾರದಲ್ಲಿ ನಡೆಸಲಾಗುತ್ತಿದೆ.
(3) ಇಲಾಖೆಯ ಎಲ್ಲಾ ವರ್ಗದ ಕಾರ್ಯನಿರ್ವಾಹಕ ಅಧಿಕಾರಿ/ಸಿಬ್ಬಂದಿಗಳಿಗೆ ನಿಯಮಿತವಾಗಿ ಪುನರ್ ವ್ಯಾಸಂಗ ತರಬೇತಿ,
(4) ಸಾರ್ವಜನಿಕರಿಗೆ ಅಗ್ನಿ ನಿಯಂತ್ರಣ ಮತ್ತು ಅಗ್ನಿಶಮನ ಕುರಿತ 30 ದಿನಗಳ ತರಬೇತಿ,
(5) ಚಲನಚಿತ್ರ ಮಂದಿರ, ಪೆಟ್ರೋಲಿಯಂ, ಉತ್ಪನ್ನಗಳ ಸ್ಪೋಟಕ ದಾಸ್ತಾನುಗಳ ಮಳಿಗೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ 3 ದಿನಗಳ ತರಬೇತಿ,
(6) 1 ರಿಂದ 6 ದಿನಗಳವರೆಗೆ ವಿಶೇಷ ತರಬೇತಿ ಕಾರ್ಯಕ್ರಮವನ್ನು ಬ್ಯಾಂಕ್, ಹೋಟೆಲ್, ಪೋಲಿಸ್ ಮತ್ತು ಇತರ ಸಂಸ್ಥೆಗಳ ಕೆಲಸಗಾರರಿಗೆ ಮತ್ತು ಅವುಗಳನ್ನು ನಿರ್ವಹಿಸುವವರಿಗೆ ನೀಡಲಾಗುತ್ತಿದೆ. ಈ ತರಬೇತಿಯನ್ನು ವಿವಿಧ ಸಂಸ್ಥೆಗಳ ಕೋರಿಕೆಯ ಮೇರೆಗೆ ವ್ಯವಸ್ಥೆ ಮಾಡಲಾಗುತ್ತದೆ. ಸಾರ್ವಜನಿಕರಿಗೆ ತರಬೇತಿ ವ್ಯವಸ್ಥೆ ಮತ್ತು ಪ್ರಮಾಣ ಪತ್ರ ನೀಡಲು ಸರ್ಕಾರದಿಂದ ನಿಗದಿತ ಶುಲ್ಕವನ್ನು ವಿಧಿಸಲಾಗುತ್ತದೆ,

**ಇ) ನಿರ್ವಹಣೆ**:- ಇಲಾಖೆಯ ವಾಹನಗಳನ್ನು ಮತ್ತು ರೇಚಕ ಯಂತ್ರಗಳನ್ನು ದುರಸ್ಥಿ ಪಡಿಸಲು ಒಂದು ಸುಸಜ್ಜಿತವಾದ ಕಾರ್ಯಗಾರವನ್ನು ಬನ್ನೇರುಘಟ್ಟ ರಸ್ತೆಯಲ್ಲಿ ಸ್ಥಾಪಿಸಲಾಗಿದೆ. ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ ರವರ ಮೇಲ್ವಿಚಾರಣೆಯಲ್ಲಿ ನುರಿತ ತಂತ್ರಜ್ಞರು ಪ್ರತಿ ನಿತ್ಯ ದುರಸ್ಥಿ ಮತ್ತು ವಾಹನಗಳ ನಿರ್ವಹಣೆಯನ್ನು ಮಾಡುತ್ತಾರೆ. ದೊಡ್ಡ ಮಟ್ಟದ ದುರಸ್ಥಿಗಳನ್ನು ಅಂಗೀಕೃತ ಡೀಲರ್ಸ್ ಅಥವಾ ಗ್ಯಾರೇಜ್‌ಗಳಲ್ಲಿ ಮಾಡಿಸಲಾಗುತ್ತದೆ. ಅವಶ್ಯಕತೆಗನುಗುಣವಾಗಿ ಕಾರ್ಯಗಾರದ ಸಿಬ್ಬಂದಿಗಳನ್ನು ರಾಜ್ಯದ ಬೇರೆ ಬೇರೆ ಅಗ್ನಿಶಾಮಕ ಠಾಣೆಗಳಲ್ಲಿರುವ ಪಂಪು ಮತ್ತು ಪಿ.ಟಿ.ಓ. ಗಳನ್ನು ದುರಸ್ಥಿ ಮಾಡಲು ಕಳುಹಿಸಿಕೊಡಲಾಗುತ್ತದೆ.

**ಈ) ಸಂಪರ್ಕ**: ಇಲಾಖೆಯು ಉತ್ತಮವಾದ ನಿಸ್ತಂತು ಸಂಪರ್ಕ ವ್ಯವಸ್ಥೆಯನ್ನು ಹೊಂದಿದೆ. ಬೆಂಗಳೂರು ನಗರದಲ್ಲಿ ನಿಸ್ತಂತು ಕಾರ್ಯಾಗಾರವನ್ನು ಸ್ಥಾಪಿಸಲಾಗಿದ್ದು, ಪೋಲೀಸ್ ನಿರೀಕ್ಷಕರು (ನಿಸ್ತಂತು) ಇವರು ಮುಖ್ಯಸ್ಥರಾಗಿದ್ದಾರೆ. ನಿಸ್ತಂತು ಸಂಪರ್ಕ ಜಾಲವನ್ನು ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಒದಗಿಸಲಾಗಿದ್ದು ಬಳ್ಳಾರಿ, ಕಲಬುರಗಿ, ಬೆಳಗಾವಿ, ಜೋಗಿಮಟ್ಟಿ, ಮುಳಯ್ಯನಗಿರಿ, ಮಂಗಳೂರು ಮತ್ತು ಮೈಸೂರು ಮುಂತಾದ ಕಡೆಗಳಲ್ಲಿ ರೀಪೇಟರ್ ಸ್ಟೇಷನ್‌ಗಳನ್ನು ಸ್ಥಾಪಿಸಲಾಗಿದೆ. ಇಲಾಖೆಯು 800 ಸಂಖ್ಯೆಯ ಉಪಕರಣಗಳನ್ನು ಹೊಂದಿದ್ದು ಮುಂದಿನ ದಿನಗಳಲ್ಲಿ ಆಧುನಿಕ ಉಪಕರಣಗಳನ್ನು ಹೊಂದುವ ಯೋಜನೆಯನ್ನು ಹೊಂದಿದೆ.

# ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ನಿರ್ದೇಶನಾಲಯದ ಅಧಿಕಾರಿ ಮತ್ತು ನೌಕರರ ವಿವರ:

**ಪೊಲೀಸ್ ಮಹಾ ನಿರ್ದೇಶಕರು ಮತ್ತು ಮಹಾ ನಿರ್ದೇಶಕರು**

↓

**ಪೊಲೀಸ್ ಮಹಾ ನಿರೀಕ್ಷಕರು ಮತ್ತು ಹೆಚ್ಚುವರಿ ಮಹಾ ನಿರ್ದೇಶಕರು**

↓

**ಪೊಲೀಸ್ ಉಪ ಮಹಾ ನಿರೀಕ್ಷಕರು**

↓

**ನಿರ್ದೇಶಕರು**

↓

**ಉಪ ನಿರ್ದೇಶಕರು (ತಾಂತ್ರಿಕ)** | **ಉಪ ನಿರ್ದೇಶಕರು (ಆಡಳಿತ)** | **ಉಪ ನಿರ್ದೇಶಕರು (ಅಗ್ನಿ ನಿಯಂತ್ರಣ)**

↓ (ಉಪ ನಿರ್ದೇಶಕರು (ಆಡಳಿತ))

| **ನಿರ್ದೇಶನಾಲಯ** | **ಅಗ್ನಿಶಾಮಕ ಠಾಣೆಗಳು** | **ಆರ್.ಎ.ಮುಂಡ್ಕುರ್ ಅಗ್ನಿ ಮತ್ತು ತುರ್ತು ಸೇವೆಗಳ ಅಕಾಡೆಮಿ** (ಎಸ್.ಎ.ಆರ್. & ಇ.ಪಿ.ಎಂ.ಎಸ್) | **ವಾಹನ ಕಾರ್ಯಾಗಾರ** | **ನಿಸ್ತಂತು ಕಾರ್ಯಾಗಾರ** |
|---|---|---|---|---|
| ಆಡಳಿತಾಧಿಕಾರಿ | ಮುಖ್ಯ ಅಗ್ನಿಶಾಮಕ ಅಧಿಕಾರಿ | ಸಮಾದೇಷ್ಟರು | ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ | ಪೊಲೀಸ್ ಇನ್ಸ್‌ಪೆಕ್ಟರ್(ವ) |
| ಲೇಖಾಧಿಕಾರಿ | ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ | ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ | ಜಿಲ್ಲಾ ಅಗ್ನಿಶಾಮಕ ಅಧಿಕಾರಿ | ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ |
| ಸಹಾಯಕ ಆಡಳಿತಾಧಿಕಾರಿ | ಜಿಲ್ಲಾ ಅಗ್ನಿಶಾಮಕ ಅಧಿಕಾರಿ | ಜಿಲ್ಲಾ ಅಗ್ನಿಶಾಮಕ ಅಧಿಕಾರಿ | ಫಿಟ್ಟರ್ ಕ್ಲಾಸ್-1 | ಸಹಾಯಕ ಸಬ್‌ಇನ್ಸ್‌ಪೆಕ್ಟರ್ |
| ಅಧೀಕ್ಷಕರು | ಅಗ್ನಿಶಾಮಕ ಠಾಣಾಧಿಕಾರಿ | ಅಗ್ನಿಶಾಮಕ ಠಾಣಾಧಿಕಾರಿ | ಫಿಟ್ಟರ್ ಕ್ಲಾಸ್-2 | ಅಗ್ನಿಶಾಮಕ |
| ಜಿಲ್ಲಾ ಅಗ್ನಿಶಾಮಕ ಅಧಿಕಾರಿ | ಸಹಾಯಕ ಅಗ್ನಿಶಾಮಕ ಅಧಿಕಾರಿ | ಪ್ರಮುಖ ಅಗ್ನಿಶಾಮಕರು | ಫಿಟ್ಟರ್ ಕ್ಲಾಸ್-3 | |
| ಪ್ರಥಮ ದರ್ಜೆ ಸಹಾಯಕರು | ಪ್ರಮುಖ ಅಗ್ನಿಶಾಮಕರು | ಅಗ್ನಿಶಾಮಕ ಚಾಲಕರು | ಚಾಲಕ ತಂತ್ರಜ್ಞರು | |
| ಶೀಘ್ರಲಿಪಿಗಾರರು | ಅಗ್ನಿಶಾಮಕ ಚಾಲಕರು | ಅಗ್ನಿಶಾಮಕರು | ವೆಲ್ಡರ್ | |
| ದ್ವಿತೀಯ ದರ್ಜೆ ಸಹಾಯಕರು | ಚಾಲಕ ತಂತ್ರಜ್ಞರು | ಲಿಪಿಕಸಿಬ್ಬಂದಿಗಳು | ಇಲೆಕ್ಟ್ರಿಷಿಯನ್ | |
| ಬೆರಳಚ್ಚುಗಾರರು | ಅಗ್ನಿಶಾಮಕರು | ಅಧೀಕ್ಷಕರು | ಕಾರ್ಪೆಂಟರ್ | |
| ಜೀಪ್ ಚಾಲಕರು | ಮುಅಶಾ/ಪ್ರಾಅಶಾ ಅಧಿಕಾರಿ | ಪ್ರಥಮ ದರ್ಜೆ ಸಹಾಯಕರು | ಪೈಂಟರ್ | |
| ಎಂ.ಸಿ.ಡಿ.ಆರ್ | ಕಚೇರಿಗಳ ಲಿಪಿಕ ಸಿಬ್ಬಂದಿಗಳು | ದ್ವಿತೀಯ ದರ್ಜೆ ಸಹಾಯಕರು | ಕ್ಲೀನರ್ | |
| ದಲಾಯತ್ | ಪ್ರಥಮ ದರ್ಜೆ ಸಹಾಯಕರು | ದ್ವಿತೀಯ ದರ್ಜೆ ಸಹಾಯಕರು | ಅಗ್ನಿಶಾಮಕ ಚಾಲಕರು | |
| + ಉಪ ನಿರ್ದೇಶಕರು (ಐ) | ದ್ವಿತೀಯ ದರ್ಜೆ ಸಹಾಯಕ | ಹಾಗೂ ಬೆರಳಚ್ಚುಗಾರರು | | |
| ನ ಅಡಿಯಲ್ಲಿ ಹೊಸದಾಗಿ | ದ್ವಿತೀಯ ದರ್ಜೆ ಸಹಾಯಕ | ಸ್ವಚ್ಛಗಾರರು | | |
| ಅಗ್ನಿ ನಿವಾರಣೆ ಘಟಕಕ್ಕೆ | ಮತ್ತು ಬೆರಳಚ್ಚುಗಾರರು | ತೋಟಗಾರರು | | |
| ಸೃಜನೆಗೊಂಡ ಹುದ್ದೆಗಳು | ಬೆರಳಚ್ಚುಗಾರರು | | | |
| | ದಲಾಯತ್ | | | |
| | ಸ್ವಚ್ಛಗಾರ | | | |

**ಇಲಾಖೆಯ ಕಾಯಿದೆ/ನಿಯಮ ಮತ್ತು ಅಧಿನಿಯಮಗಳು:-**

1. **ಸ್ಥಾಯಿ ಆದೇಶಗಳು:**

ಈ ಆದೇಶಗಳನ್ನು ಇಲಾಖೆಯ ಎಲಾ ನೌಕರರನ್ನು ಇಲಾಖಾ ಮುಖ್ಯಸ್ಥರು ನೇತೃತ್ವಕ್ಕೆ ಬದ್ಧವಾಗಿಡಲು ಕರ್ತವ್ಯ ನಿರ್ವಹಿಸುವ ಇಲಾಖಾ ಮುಖ್ಯಸ್ಥರು ಹೊರಡಿಸಿರುತ್ತಾರೆ. ಕಚೇರಿಯ ಠಾಣೆಯ ದೈನಂದಿನ ವ್ಯವಹಾರಗಳಿಗೆ ಮತ್ತು ಸಾರ್ವಜನಿಕರೊಂದಿಗಿನ ವ್ಯವಹಾರಗಳಿಗೆ ಸಂಬಂಧಿಸಿದಂತೆ ಇಲಾಖೆ ಇದುವರೆವಿಗೂ 151(ಎ) ಸ್ಥಾಯಿ ಆದೇಶಗಳನ್ನು ಜಾರಿಗೊಳಿಸಿದೆ. ಹಾಗೂ (1970 ರಿಂದ ಇದುವರೆಗೂ) ಇತ್ತಿಚೆಗಿನ ತಿದ್ದುಪಡಿಗಳನ್ನು ಒಳಗೊಂಡಂತೆ ಈ ಸ್ಥಾಯಿ ಆದೇಶವನ್ನು ಪುನರಾವಲೋಕನ ಮಾಡಲಾಗುತ್ತಿದೆ.

2. **ಅಗ್ನಿಶಾಮಕ ಸೇವೆಗಳ ಕೈಪಿಡಿ** :

ಪ್ರಸುತ್ತ ಇಲಾಖೆಯಲ್ಲಿರುವ ಕೈಪಿಡಿಯ 1979 ರಿಂದ ಜಾರಿಗೆ ಬಂದಿದೆ ಅಗ್ನಿಶಾಮಕ ಸೇವೆ ಕೈಪಿಡಿಯಲ್ಲಿ ಸೇವೆ ಮತ್ತು ಕರ್ತವ್ಯಗಳು, ತರಬೇತಿ, ಅಧಿಕಾರಿ/ಸಿಬ್ಬಂದಿಗಳ ಜವಾಬ್ದಾರಿ, ನಡತೆ ನಿಯಮ, ಶಿಸ್ತು, ಇಲಾಖಾ ವಿಚಾರಣೆ ನಡಾವಳಿಗಳು, ಸಾರ್ವಜನಿಕ ಪ್ರದೇಶಗಳ ಪರಿಶೀಲನೆ, ಅಗ್ನಿಶಾಮಕ ಉಪಕರಣಗಳ ಬಳಕೆ, ತುರ್ತು ಅಗ್ನಿಕರೆಗಳಿಗೆ ಪ್ರಕ್ರಿಯಿಸುವ ಕಾರ್ಯವಿಧಾನ, ಸಮವಸ್ತ್ರ ಮತ್ತು ಉಪಕರಣಗಳು, ದಾಖಲೆಗಳ ನಿರ್ವಹಣೆ, ಪ್ರಶಸ್ತಿ ಮತ್ತು ಬಹುಮಾನ, ಮಾಸಿಕ ವರದಿ, ಮತ್ತು ಆಂಬ್ಯುಲೆನ್ಸ್ ಸೇವೆ, ಇತ್ಯಾದಿಗಳಿಗೆ ಸಂಬಂಧಿಸಿದಂತೆ ವಿವಿಧ ನಿಯಮ ಮತ್ತು ಮಾರ್ಗಸೂಚಿಗಳನ್ನು ಈ ಕೈಪಿಡಿ ಒಳಗೊಂಡಿದೆ. ಪ್ರಸ್ತುತ ಆಧುನಿಕ ಉಪಕರಣ, ಆಡಳಿತ, ಸಮವಸ್ತ್ರ, ತಾಂತ್ರಿಕತೆ ಮತ್ತು ಹೊಸ ಕಾರ್ಯ ವಿಧಾನಗಳನ್ನು ಅಳವಡಿಸಿಕೊಂಡು ಕೈಪಿಡಿಯಲ್ಲಿ ಬದಲಾವಣೆ ಮಾಡುವ ಪ್ರಕ್ರಿಯೆ ನಡೆಯುತ್ತಿದೆ.

3. **ಅಗ್ನಿಶಾಮಕ ಸೇವೆಗಳ ಕಾಯಿದೆ:**

ಪ್ರಸ್ತುತ ಇಲಾಖೆಯಲ್ಲಿರುವ ಅಗ್ನಿಶಾಮಕ ಸೇವೆಗಳ ಕಾಯ್ದೆಯು 1964 ರಿಂದ ಜಾರಿಯಲ್ಲಿದೆ. ಇದರಲ್ಲಿ ಇಲಾಖೆಯ ನಿರ್ವಹಣೆ ಮತ್ತು ಅದಕ್ಕೆ ಸಂಬಂಧಪಟ್ಟ ಕಾರ್ಯಾಚರಣೆಗಳ ಬಗ್ಗೆ ತಿಳಿಸುತ್ತದೆ. ಒಂದು ಪರಿಷ್ಕೃತ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಕಾಯಿದೆ ಕರಡನ್ನು ತಯಾರಿಸಿ ಸರ್ಕಾರದ ಅನುಮೋದನೆಗೆ ಕಳುಹಿಸಲಾಗುವುದು.

4. **ಅಗ್ನಿಶಾಮಕ ಸೇವೆಗಳ ನಿಯಮಗಳು:**

ಈ ಇಲಾಖಾ ನಿಯಮಗಳನ್ನು 1971 ರಿಂದ ಜಾರಿ ಮಾಡಲಾಗಿದೆ. ಈ ನಿಯಮಗಳಲ್ಲಿ ಕರ್ತವ್ಯಗಳು ಜವಾಬ್ದಾರಿಗಳು, ಸಾರ್ವಜನಿಕ ಮತ್ತು ಸರ್ಕಾರಿ ಉಪಯೋಗಕ್ಕೆ ವಾಹನಗಳ ತಟಸ್ಥ ಕರ್ತವ್ಯ ನಿಯೋಜನೆ, ಬಹುಮಾನ ಇತ್ಯಾದಿಗಳಿಗೆ ಸಂಬಂಧಿಸಿದಂತೆ ವಿವರಿಸಲಾಗಿದೆ. ಪ್ರಸ್ತುತ ಸನ್ನಿವೇಶಗಳಿಗೆ ತಕ್ಕಂತೆ ಈ ನಿಯಮಗಳನ್ನು ಬದಲಾವಣೆ ಮಾಡಿ ಪುನರ್ ರಚಿಸಬೇಕಿರುತ್ತದೆ. ಈ ಪುನರ್ ರಚನಾ ಸಂದರ್ಭದಲ್ಲಿ ಸಾರ್ವಜನಿಕ, ಖಾಸಗಿ ಮತ್ತು ಸರ್ಕಾರದ ಪರಸ್ಪರ ಸಮಾಲೋಚನೆಗೆ ಹೆಚ್ಚಿನ ಮಹತ್ವ ನೀಡಬೇಕಾಗಿದೆ.

5. **ಅಗ್ನಿಶಾಮಕ ಸೇವೆಗಳ ಪ್ರಕಟಣೆಗಳು:**

ಅ) ಕೈಗಾರಿಕಾ ಹಾಗೂ ವಾಣಿಜ್ಯ ಪ್ರದೇಶಗಳಲ್ಲಿ ಸಂಭವಿಸುವ ಅಗ್ನಿ ಅನಾಹುತಗಳ ಬಗ್ಗೆ ಮುನ್ನೆಚ್ಚರಿಕೆ ಕ್ರಮಗಳನ್ನು ಬಗ್ಗೆ ಪ್ರಸ್ತುತ ಇರುವ ಪ್ರಕಟಣೆಯು 1971 ನೇ ಸಾಲಿನಲ್ಲಿ ಅಸ್ತಿತ್ವಕ್ಕೆ ಬಂದಿರುತ್ತದೆ. ಈ ಪ್ರಕಟಣೆಯು ಸಾಮಾನ್ಯವಾಗಿ ಎಲ್ಲಾ ರೀತಿಯ ಪ್ರದೇಶಗಳನ್ನು ಒಳಗೊಂಡಿದೆ. ಇತ್ತೀಚಿನ ದಿನಗಳಲ್ಲಿ ಸಂಭವಿಸುತ್ತಿರುವಂತಹ ರಾಸಾಯನಿಕ ಅಗ್ನಿ ಅನಾಹುತಗಳು, ದೊಡ್ಡ ಗೋದಾಮುಗಳು, ಅನಿಲ ದುರ್ಘಟನೆಗಳು ಹಾಗೂ ಹೆಚ್ಚುತ್ತಿರುವ ಬಹು ಅಂತಸ್ತಿನ ಕಟ್ಟಡಗಳನ್ನು ಪರಿಗಣಿಸಿ ಸದರಿ ಪ್ರಕಟಣೆಯನ್ನು ಮಾರ್ಪಾಡು ಮಾಡಬೇಕಾಗಿದೆ.

ಆ) ಸರ್ಕಾರದ ಅಧಿಸೂಚನೆ ಸಂ. ಹೆಚ್‌ಡಿ 33 ಎಸ್‌ಎಫ್‌ಬಿ 2011, ಬೆಂಗಳೂರು ದಿ: 07-07-2011 ರ ಪ್ರಕಾರ ಇಲಾಖೆಯು ರಾಜ್ಯಾದ್ಯಂತ 16237 ಬಹುಮಹಡಿ ಕಟ್ಟಡಗಳನ್ನು ಗುರುತಿಸಿದೆ. ಅವುಗಳಲ್ಲಿ, 2221 ಕಟ್ಟಡಗಳನ್ನು ಅಗ್ನಿಸುರಕ್ಷತಾ ದೃಷ್ಠಿಯಿಂದ ನಿರೀಕ್ಷಣೆ ಮಾಡಲಾಗಿದ್ದು, ಸಮೀಕ್ಷೆಯು ಮುಂದುವರೆದಿದೆ ಹಾಗೂ 2016-17 ನೇ ಸಾಲಿನಲ್ಲಿ ರಾಜ್ಯಾದ್ಯಂತ 246 ಬಹುಮಹಡಿ ಆಸ್ಪತ್ರೆಯ ಕಟ್ಟಡ, 32 ವೈಭವಿತ ಬಹುಮಹಡಿ ಹೊಟೇಲ್ ಕಟ್ಟಡ(Star Hotels), 28 ಮಾಲ್‌ಗಳು ಮತ್ತು ಮಲ್ಟಿಪ್ಲೆಕ್ಸ್ ಬಹುಮಹಡಿ ಕಟ್ಟಡ, 112 ಬಹುಮಹಡಿ ಕಚೇರಿಗಳು ಮತ್ತು ವಸತಿ ಕಟ್ಟಡಗಳು ಹಾಗೂ ಬೆಂಗಳೂರಿನ ಅರಮನೆ ಮೈದಾನದಲ್ಲಿನ 44 ಸಮಾವೇಶ ಮತ್ತು ಸಭಾ ಕಟ್ಟಡಗಳ ಪರಿವೀಕ್ಷಣೆ ಮಾಡಲಾಗಿದ್ದು, ಈ ಸಮೀಕ್ಷೆಯು ಸಹ ಮುಂದುವರೆದಿದೆ.

6. **ವೃಂದ ಮತ್ತು ನೇಮಕಾತಿ ನಿಯಮಗಳು:**

ಸರ್ಕಾರದ ಅಧಿಸೂಚನೆ ಸಂಖ್ಯೆ.ಹೆಚ್.ಡಿ. 146 ಎಸ್.ಎಫ್.ಬಿ. 2008(ಭಾಗ) ದಿನಾಂಕ: 10-09-2013 ರಲ್ಲಿ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನೊಳಗೊಂಡ ವಿಸ್ತಾರವಾದ ಪರಿಷ್ಕೃತ ಅಧಿಸೂಚನೆಯನ್ನು ಜಾರಿ ಮಾಡಿದೆ.

ಈ ಪರಿಷ್ಕೃತ ನಿಯಮಗಳನ್ವಯ ನೇರ ನೇಮಕಾತಿ ಹುದ್ದೆಗಳಾದ ಅಗ್ನಿಶಾಮಕ ಠಾಣಾಧಿಕಾರಿ, ಚಾಲಕ ತಂತ್ರಜ್ಞ, ಅಗ್ನಿಶಾಮಕ ಚಾಲಕ ಮತ್ತು ಅಗ್ನಿಶಾಮಕ ಹುದ್ದೆಗಳ ನೇಮಕಾತಿಗೆ ಪ್ರತ್ಯೇಕವಾದ ನೇಮಕಾತಿ ಪ್ರಾಧಿಕಾರವನ್ನು ಸೃಜಿಸಿದೆ. ಮುಂದುವರೆದಂತೆ, ಅಗ್ನಿಶಾಮಕ ಹಾಗೂ ಅಗ್ನಿಶಾಮಕ ಚಾಲಕರುಗಳ ವಿದ್ಯಾರ್ಹತೆಯನ್ನು 10ನೇ ತರಗತಿಗೆ ನಿಗದಿಪಡಿಸಲಾಗಿದೆ ಮತ್ತು ಚಾಲಕ ತಂತ್ರಜ್ಞರವರುಗಳ ವಿದ್ಯಾರ್ಹತೆಯು 10ನೇ ತರಗತಿ ಹಾಗೂ ಐ.ಟಿ.ಐ(ಆಟೋಮೊಬೈಲ್) ನಿಗದಿಪಡಿಸಿದೆ.

2015 ನೇ ಸಾಲಿನಲ್ಲಿ 1436 ಅಗ್ನಿಶಾಮಕ, 368 ಅಗ್ನಿಶಾಮಕ ಚಾಲಕ, 96 ಚಾಲಕ ತಂತಜ್ಞ ಮತ್ತು 89 ಅಗ್ನಿಶಾಮಕ ಠಾಣಾಧಿಕಾರಿ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ದಿ:29-7-2015 ರಂದು ಅಧಿಸೂಚನೆ ಹೊರಡಿಸಿ, 96 ಚಾಲಕ ತಂತಜ್ಞ 368 ಅಗ್ನಿಶಾಮಕ ಚಾಲಕ ಮತ್ತು 1436 ಅಗ್ನಿಶಾಮಕ ಹುದ್ದೆಗಳಿಗೆ ಸಂಬಂಧಪಟ್ಟಂತೆ ದೈಹಿಕ ಸಾಮರ್ಥ್ಯತೆ ಹಾಗೂ ದೈಹಿಕ ಸಹಿಷ್ಣತೆ ಪರೀಕ್ಷೆಗಳನ್ನು ನಡೆಸಿದ್ದು, ಈಗಾಗಲೇ 67 ಚಾಲಕ ತಂತ್ರಜ್ಞ, 330 ಅಗ್ನಿಶಾಮಕ ಚಾಲಕರು ಹಾಗೂ 1009 ಅಗ್ನಿಶಾಮಕರುಗಳಿಗೆ ನೇಮಕಾತಿ ಆದೇಶ ಹೊರಡಿಸಿದ್ದು, ಸದರಿಯವರುಗಳಿಗೆ ತರಬೇತಿಗೆ ನಿಯೋಜಿಸಲಾಗಿದ್ದು, ಇವರುಗಳಲ್ಲಿ 65 ಚಾಲಕ ತಂತ್ರಜ್ಞರು ಹಾಗೂ 165 ಅಗ್ನಿಶಾಮಕ ಚಾಲಕರುಗಳು ತರಬೇತಿ ಪೂರ್ಣಗೊಳಿಸಿದ್ದು ಠಾಣೆಗಳಿಗೆ ನಿಯೋಜಿಸಲಾಗಿದೆ. ಉಳಿದಂತೆ 01 ಚಾಲಕ ತಂತ್ರಜ್ಞ, 172 ಅಗ್ನಿಶಾಮಕ ಚಾಲಕ ಹಾಗೂ 1009 ಅಗ್ನಿಶಾಮಕ ಅಭ್ಯರ್ಥಿಗಳಿಗೆ ನೇಮಕಾತಿ ಹೊರಡಿಸಿ ತರಬೇತಿಗೆ ನಿಯೋಜಿಸಲಾಗಿದೆ.

ಅಗ್ನಿಶಾಮಕ, ಅಗ್ನಿಶಾಮಕ ಚಾಲಕ ಹಾಗೂ ಚಾಲಕ ತಂತಜ್ಞ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳ ವಯೋಮಿತಿಯನ್ನು ಮೀಸಲಾತಿ ಅಭ್ಯರ್ಥಿ ಮತ್ತು ಸಾಮಾನ್ಯ ಅಭ್ಯರ್ಥಿಗಳಿಗೆ ಕ್ರಮವಾಗಿ 38 ಮತ್ತು 33 ವರ್ಷಗಳಿಂದ 28 ಮತ್ತು 26 ವರ್ಷಗಳಿಗೆ ಇಳಿಸಲಾಗಿದೆ.

ಅಗ್ನಿಶಾಮಕ ಠಾಣಾಧಿಕಾರಿಗಳಿಗೆ ಸಂಬಂಧಿಸಿದಂತೆ ಮೀಸಲಾತಿ ಆಭ್ಯರ್ಥಿಗೆ ಕನಿಷ್ಟ 21 ಗರಿಷ್ಟ 28 ವರ್ಷ ಸಾಮಾನ್ಯ ಅಭ್ಯರ್ಥಿಗೆ ಕನಿಷ್ಟ 21 ಗರಿಷ್ಟ 26 ವರ್ಷಗಳಿಗೆ ವಯೋಮಿತಿ ನಿಗದಿಗೊಳಿಸಿದೆ.

ಎಲ್ಲಾ ಪ್ರಕ್ರಿಯೆಯನ್ನು ಗಣಕೀಕರಣಗೊಳಿಸಲಾಗಿದೆ ಹಾಗೂ ಸಿಬ್ಬಂದಿಗಳನ್ನು ಪ್ರತಿಭೆಯ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ ಹಾಗೂ ನೇಮಕಾತಿ ಪ್ರಕ್ರಿಯೆಯನ್ನು ಪಾರದರ್ಶಕತೆ ಪಾಲಿಸಲು ವಿಡಿಯೋಗ್ರಾಫ್ ಮೂಲಕ ಚಿತ್ರೀಕರಿಸಲಾಗುತ್ತಿದೆ.

**ಸಾಧನೆ: ಕಳೆದ 2 ವರ್ಷಗಳಲ್ಲಿ ಇಲಾಖೆಯ ಕಾರ್ಯ ಚಟುವಟಿಕೆಗಳು & ಸಾಧನೆಗಳು ಈ ಕೆಳಗಿನಂತಿವೆ.**

2015-16ನೇ ಸಾಲಿನಲ್ಲಿ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ 05 ಹೊಸ ಅಗ್ನಿಶಾಮಕ ಠಾಣೆಗಳನ್ನು ಪ್ರಾರಂಭಿಸಲಾಗಿದೆ. (ಶಿರಹಟ್ಟಿ, ಯಲ್ಲಾಪುರ, ಸಚಿವಾಲಯ, ಕೊರಟಗೆರೆ ಮತ್ತು ಮಾಲೂರು)

2016-17ನೇ ಸಾಲಿನಲ್ಲಿ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ 16 ಹೊಸ ಅಗ್ನಿಶಾಮಕ ಠಾಣೆಗಳನ್ನು ಪ್ರಾರಂಭಿಸಲಾಗಿದೆ. (ಸಕಲೇಶಪುರ, ಯಲಬುರ್ಗ, ನಾಗರಭಾವಿ, ಹತ್ತರಗಿ, ಸುಂಕದಕಟ್ಟೆ, ಕೊಳ್ಳೆಗಾಲ, ಶಿಡ್ಲಘಟ್ಟ, ದೇವನಹಳ್ಳಿ, ಬಾದಾಮಿ, ಹುಳಿಮಾವು, ಸಿದ್ದಾಪುರ, ಗುಬ್ಬಿ, ಗುಡಿಬಂಡೆ, ಅರಕೇರಾ, ವೈಟ್‌ಫೀಲ್ಡ್ (ಇಪಿಐಪಿ), ಜೋಯಿಡಾ)

2015ನೇ ಸಾಲಿನಲ್ಲಿ 02 ಸ್ಥಳಗಳಲ್ಲಿ ಖಾಯಂ ಅಗ್ನಿಶಾಮಕ ಠಾಣೆ ಕಟ್ಟಡ, 58 ಅಧಿಕಾರಿ/ಸಿಬ್ಬಂದಿಗಳ ವಸತಿ ಗೃಹಗಳನ್ನು ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ನಿಗಮ ನಿಯಮಿತ, ಬೆಂಗಳೂರು ಇವರಿಂದ ನಿರ್ಮಿಸಿದ್ದು, ಇಲಾಖೆಯ ವಶಕ್ಕೆ ಪಡೆಯಲಾಗಿದೆ.

2016ನೇ ಸಾಲಿನಲ್ಲಿ 4 ಸ್ಥಳಗಳಲ್ಲಿ ಖಾಯಂ ಅಗ್ನಿಶಾಮಕ ಠಾಣೆ ಕಟ್ಟಡ, 58 ಅಧಿಕಾರಿ/ಸಿಬ್ಬಂದಿಗಳ ವಸತಿ ಗೃಹಗಳನ್ನು ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ನಿಗಮ ನಿಯಮಿತ, ಬೆಂಗಳೂರು ಇವರಿಂದ ನಿರ್ಮಿಸಿದ್ದು, ಇಲಾಖೆಯ ವಶಕ್ಕೆ ಪಡೆಯಲಾಗಿದೆ.

2016ನೇ ಸಾಲಿನಲ್ಲಿ ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳು ಅವರ ಸೇವಾ ಅವಧಿಯಲ್ಲಿ ಮಾಡಲಾದ ಅತ್ಯುತ್ತಮ ಸೇವೆ ಹಾಗೂ ಇನ್ನಿತರ ಕಾರ್ಯಗಳನ್ನು ಗುರುತಿಸಿ, 21 ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಮಾನ್ಯ ಮುಖ್ಯ ಮಂತ್ರಿಯವರ ಚಿನ್ನದ ಪದಕ ನೀಡಲಾಗಿದೆ.

2016ರ ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ಘನತೆವೆತ್ತ ರಾಷ್ಟ್ರಪತಿಯವರು 03 ಜನ ಅಧಿಕಾರಿ/ಸಿಬ್ಬಂದಿಗಳಿಗೆ ಶ್ಲಾಘನೀಯ ಸೇವೆಗಾಗಿ ರಾಷ್ಟ್ರಪತಿಯವರ ಶ್ಲಾಘನೀಯ ಸೇವಾ ಪದಕ ಹಾಗೂ 2017 ರ ಗಣರಾಜ್ಯೋತ್ಸವ ಸಂದರ್ಭದಲ್ಲಿ ಘನತೆವೆತ್ತ ರಾಷ್ಟ್ರಪತಿಯವರು ಒಬ್ಬ ಅಧಿಕಾರಿಗೆ ವಿಶಿಷ್ಟ ಸೇವಾ ಪದಕ ಹಾಗೂ 04 ಜನ ಅಧಿಕಾರಿ/ಸಿಬ್ಬಂದಿಗಳಿಗೆ ಶ್ಲಾಘನೀಯ ಸೇವೆಗಾಗಿ ಶ್ಲಾಘನೀಯ ಸೇವಾ ಪದಕಗಳನ್ನು ದಯಪಾಲಿಸಿರುವರು.

2016-17ನೇ ಸಾಲಿನಲ್ಲಿ ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಲ್ಲಿ ಒಟ್ಟು 4927 ಭರ್ತಿಯಾದ ಹುದ್ದೆಗಳು ಇರುತ್ತವೆ. ಅವುಗಳಲ್ಲಿ ಆರೋಗ್ಯ ಭಾಗ್ಯ ಯೋಜನೆಯಡಿಯಲ್ಲಿ ಅಂದಾಜು 3600 ಅಧಿಕಾರಿ/ಸಿಬ್ಬಂದಿಗಳು ಸದಸ್ಯತ್ವ ಹೊಂದಿರುತ್ತಾರೆ. ಈ ಯೋಜನೆಯು ಪ್ರಸ್ತುತ 92 ಆಸ್ಪತ್ರೆಗಳನ್ನು ಒಳಗೊಂಡಿರುತ್ತದೆ. ಆರೋಗ್ಯ ಭಾಗ್ಯ ಯೋಜನೆಯಡಿಯಲ್ಲಿ 660 ಅಧಿಕಾರಿ/ಸಿಬ್ಬಂದಿಗಳು ಚಿಕಿತ್ಸೆ ಪಡೆದಿದ್ದು, ರೂ. 1,38,76,987/- (ರೂಪಾಯಿ ಒಂದು ಕೋಟಿ ಮೂವತ್ತೆಂಟು ಲಕ್ಷ ಎಪ್ಪತ್ತಾರು ಸಾವಿರದ ಒಂಬತ್ತು ನೂರ ಎಂಬತ್ತೇಳು) ಗಳು ವೆಚ್ಚವಾಗಿರುತ್ತದೆ. ಇದಲ್ಲದೇ ವೈದ್ಯಕೀಯ ಮರು ವೆಚ್ಚದಲ್ಲಿ ಒಟ್ಟು 683 ಅಧಿಕಾರಿ/ಸಿಬ್ಬಂದಿಗಳು ಹಾಗೂ ಅವರ ಕುಟುಂಬ ವರ್ಗದವರು ಚಿಕಿತ್ಸೆಯನ್ನು ಸರ್ಕಾರಿ ಅರ್ಹವಿರುವ ಆಸ್ಪತ್ರೆಗಳಲ್ಲಿ ಪಡೆದಿದ್ದು, ರೂ.58,58,514/- (ರೂಪಾಯಿ ಐವತ್ತೆಂಟು ಲಕ್ಷ ಐವತ್ತೆಂಟು ಸಾವಿರದ ಐದು ನೂರ ಹದಿನಾಲ್ಕು) ಗಳನ್ನು ಅಧಿಕಾರಿ/ಸಿಬ್ಬಂದಿಗಳಿಗೆ ಮರು ಪಾವತಿಸಲಾಗಿದೆ.

**ಕೆ–ಸೇಫ್ 2010 ಯೋಜನೆ**

ಇಲಾಖೆಯ ಸರ್ವೋತೋಮುಖ ಅಭಿವೃದ್ಧಿಗಾಗಿ 5 ವರ್ಷದ ಅವಧಿಯ ಕೆ–ಸೇಫ್ 2010 ಯೋಜನೆಯನ್ನು ಇಲಾಖೆಯು ಪ್ರಾರಂಭಿಸಿದೆ. ಕೆ–ಸೇಫ್ 2010 (K-SAFE 2010) ಎಂದರೆ Karnataka State Accelerated Fire and Emergency Services Improvement Project 2010.

ಪ್ರಸ್ತುತ ಈ ಯೋಜನೆಯಲ್ಲಿ ನಿರ್ಧಿಷ್ಟಪಡಿಸಿದ ಗುರಿಗಳನ್ನು ಈಡೇರಿಸಲು 2 ವರ್ಷಗಳ ಕಾಲ ಹೆಚ್ಚುವರಿ ಅವಧಿಯನ್ನು ನೀಡಲಾಗಿದೆ. ದಿನಾಂಕ: 10–8–2005 ರಲ್ಲಿ ಒಟ್ಟು ರೂ.323.30 ಕೋಟಿಗಳ ಅನುದಾನದ ಯೋಜನೆಯನ್ನು ತೀವ್ರತರವಾದ ಇಲಾಖೆಯ ಸರ್ವೋತೋಮುಖ ಅಭಿವೃದ್ಧಿಗಾಗಿ ತಯಾರಿಸಿ ಅದರಿಂದ ಇಲಾಖೆಯ ವಿಸ್ತರಣೆ, ವರ್ಧನೆ, ಆಧುನೀಕರಣ, ಶಾಸನ & ನಿಯಮಗಳ ಸುಧಾರಣೆ & ವೈಜ್ಞಾನಿಕವಾಗಿ ವಿಶ್ಲೇಶಿಸಿ ಅಗ್ನಿಶಾಮಕ ಠಾಣಾ ಸ್ಥಳಗಳನ್ನು ನಿಗದಿಪಡಿಸುವುದು ಮುಂತಾದವುಗಳು ಸೇರಿವೆ. ರಾಜ್ಯದಲ್ಲಿ ಇಲಾಖೆಯ ಸೇವೆಯು ತಲುಪದೇ ಇರುವ ತಾಲ್ಲೂಕುಗಳಲ್ಲಿ ಅಗ್ನಿಶಾಮಕ ಠಾಣೆಗಳನ್ನು ಪ್ರಾರಂಭಿಸಲು ಪ್ರಾಧಾನ್ಯತೆ ನೀಡಲಾಗಿದೆ. ಮೇಲ್ಕಂಡ ಗುರಿಗಳನ್ನು ಹೊಂದಿದ ಈ ಯೋಜನೆಯು ರಾಜ್ಯದ ಎಲ್ಲಾ ತಾಲ್ಲೂಕುಗಳನ್ನು ಸೇರಿ ಪೂರ್ಣ ರಾಜ್ಯ ವ್ಯಾಪ್ತಿಯನ್ನು ಹೊಂದಿದೆ.

ಮೂಲತ: ಈ ಯೋಜನೆಯು ಇಲಾಖೆಯ ಸ್ಥಿತಿಯನ್ನು ಮತ್ತು ಸಾರ್ವಜನಿಕರಿಗೆ ಸಿಗುವ ಸೇವೆಯನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಪ್ರಗತಿ ಸಾಧಿಸಿದೆ. ಈ ಯೋಜನೆಯು ಈ ಕೆಳಕಂಡ ಮುಖ್ಯ ಅಂಶಗಳನ್ನು ಒಳಗೊಂಡಿದೆ:

ಎ. ಪ್ರತಿಯೊಂದು ತಾಲ್ಲೂಕಿನಲ್ಲಿ ಅಗ್ನಿಶಾಮಕ ಠಾಣೆ.
ಬಿ. ಉನ್ನತೀಕರಣ & ಆಧುನೀಕರಣ.
ಸಿ. ಪೂರ್ವ ಸಿದ್ಧತೆ & ವಿಪತ್ತು ನಿರ್ವಹಣೆ.
ಡಿ. ಶೋಧನಾ ಮತ್ತು ರಕ್ಷಣಾ ಕಾರ್ಯ

**ಸಂಸ್ಥೆ ಸಿದ್ಧತೆಗಳು**

ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯು ಪೊಲೀಸ್ ಮಹಾ ನಿರ್ದೇಶಕರು ಮತ್ತು ಮಹಾ ನಿರ್ದೇಶಕರವರ ಆಡಳಿತದ ಅಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದೆ. ಸಾಮಾನ್ಯವಾಗಿ ಸದರಿ ಹುದ್ದೆಯನ್ನು ಪೊಲೀಸ್ ಮಹಾ ನಿರ್ದೇಶಕರ ಹುದ್ದೆಯ ಸಮಾನಾಂತರ ಅಧಿಕಾರಿಗಳು ಹೊಂದಿರುತ್ತಾರೆ. ಪೊಲೀಸ್ ಮಹಾ ನಿರ್ದೇಶಕರವರು, ಮಹಾ ಸಮಾದೇಷ್ಟರು, ಗೃಹರಕ್ಷಕ ದಳ ಹಾಗೂ ನಿರ್ದೇಶಕರು, ಪೌರರಕ್ಷಣೆ ಇಲಾಖೆಯ ಮುಖ್ಯಸರಾಗಿಯೂ ಸಹ ಕರ್ತವ್ಯ ನಿರ್ವಹಿಸುತ್ತಾರೆ. ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯು ಅಚ್ಚುಕಟ್ಟಾದ ವರದಿ ನೀತಿ ನಿಯಮಗಳುಳ್ಳ ಒಂದು ಶಿಸ್ತಿನ ಇಲಾಖೆಯಾಗಿರುತ್ತದೆ. ಸಾರ್ವಜನಿಕರ ರಕ್ಷಣೆಯನ್ನು ಯಾವುದೇ ಕಾರಣಕ್ಕೂ ಕಡೆಗಣಿಸದೆ, ಅದರ ಬಗೆಗೆ ಸೂಕ್ತ ಕ್ರಮ ಜರುಗಿಸಲು ರಾಜ್ಯದಲ್ಲಿ ಇಲಾಖೆಯು ಪ್ರತಿಯೊಂದು ವರ್ಗದಲ್ಲೂ ಸ್ವಯಂ–ಶಿಸ್ತು ಮತ್ತು ಎಚ್ಚರಿಕೆಯ ವ್ಯಕ್ತಿತ್ವವನ್ನು ಪ್ರಚೋದಿಸುತ್ತಿದೆ.

ಕಾರ್ಯ ನಿರ್ವಹಣಾ ದೃಷ್ಟಿಯಿಂದ ಬೆಂಗಳೂರು ನಗರವನ್ನು 1) ಮುಖ್ಯ ಅಗ್ನಿಶಾಮಕ ಅಧಿಕಾರಿ, ಬೆಂಗಳೂರು ಪೂರ್ವ ಹಾಗೂ 2) ಮುಖ್ಯ ಅಗ್ನಿಶಾಮಕ ಅಧಿಕಾರಿ, ಬೆಂಗಳೂರು ಪಶ್ಚಿಮ ಎಂದು ಎರಡು ಪ್ರಾಂತ್ಯಗಳಾಗಿ ವಿಂಗಡಿಸಲಾಗಿದೆ. ಈ ಪ್ರಾಂತ್ಯಗಳನ್ನು ಈ ಕೆಳಕಾಣಿಸಿದಂತೆ 04 ವಲಯಗಳಾಗಿ ಇವರುಗಳ ಅಧೀನದಲ್ಲಿ ವಿಂಗಡಿಸಿದೆ.

1) ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ, ಪೂರ್ವ ವಲಯ, ಬೆಂಗಳೂರು, 2) ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ, ಪಶ್ಚಿಮ ವಲಯ, ಬೆಂಗಳೂರು, 3) ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ, ಉತ್ತರ ವಲಯ, ಬೆಂಗಳೂರು ಮತ್ತು 4) ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ, ದಕ್ಷಿಣ ವಲಯ, ಬೆಂಗಳೂರು. ಪ್ರತಿಯೊಬ್ಬ ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿಯ ಅಡಿಯಲ್ಲಿ 2 ರಿಂದ 3 ಜಿಲ್ಲಾ ಅಗ್ನಿಶಾಮಕ ಅಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಾರೆ. ಸದರಿ ಜಿಲ್ಲಾ ಅಗ್ನಿಶಾಮಕ ಅಧಿಕಾರಿಗಳು ಸಂಬಂಧಪಟ್ಟ ಜಿಲ್ಲೆಗಳ ಅಗ್ನಿಶಾಮಕ ಠಾಣೆಗಳಲ್ಲಿ ಬಟವಾಡೆ ಮತ್ತು ವಿಲೇವಾರಿ ಮಾಡುವ ಅಧಿಕಾರವನ್ನು ಹೊಂದಿರುತ್ತಾರೆ ಮತ್ತು ಅವರ ಕಾರ್ಯ ಪರಿಮಿತಿಗೆ ಒಳಪಡುವ ಅಗ್ನಿಶಾಮಕ ಠಾಣೆಗಳ ಮೇಲ್ವಿಚಾರಣೆ ಕಾರ್ಯ ನಿರ್ವಹಿಸುತ್ತಾರೆ. ಪ್ರತಿಯೊಬ್ಬ ಜಿಲ್ಲಾ ಅಗ್ನಿಶಾಮಕ ಅಧಿಕಾರಿಯ ಅಡಿಯಲ್ಲಿ 3 ರಿಂದ 4 ಅಗ್ನಿಶಾಮಕ ಠಾಣಾಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಾರೆ. ಅಗ್ನಿಶಾಮಕ ಠಾಣಾಧಿಕಾರಿಗಳು ಘಟಕಾಧಿಕಾರಿಗಳಾಗಿದ್ದು, ಅವರು ಠಾಣೆಯ ಕರ್ತವ್ಯವನ್ನು ನಿರ್ವಹಿಸುತ್ತಿರುತ್ತಾರೆ.

**ಶಾಸನ ತಿದ್ದುಪಡಿ**

ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯು ಕರ್ನಾಟಕ ಫೈರ್ ಫೋರ್ಸ್ ಕಾಯ್ದೆ, 1964 ಹೊಂದಿದೆ. ಈ ಕಾಯ್ದೆಯನ್ನು ಇಡೀ ಕರ್ನಾಟಕ ರಾಜ್ಯಕ್ಕೆ ವಿಸ್ತರಿಸಲಾಗಿದೆ.

**ತರಬೇತಿ:** ಇಲಾಖೆಯ ರಾಜ್ಯ ಮಟ್ಟದ ಆರ್.ಎ.ಮುಂಡ್ಕುರ್ ಅಗ್ನಿಶಾಮಕ ಮತ್ತು ತುರ್ತು ಸೇವಾ ಮಹಾವಿದ್ಯಾಲಯ, ಬನ್ನೇರುಘಟ್ಟ ರಸ್ತೆ, ಬೆಂಗಳೂರು ಇಲ್ಲಿ ದಿನಾಂಕ 02-04-1970 ರಿಂದ ಕಾರ್ಯ ನಿರ್ವಹಿಸುತ್ತಿದ್ದು, ಈ ಮಹಾ ವಿದ್ಯಾಲಯದಲ್ಲಿ ಇಲಾಖೆಯಲ್ಲಿ ಹೊಸದಾಗಿ ನೇಮಕವಾದ ಸಿಬ್ಬಂದಿಗಳಿಗೆ 06 ತಿಂಗಳ ಬುನಾದಿ ತರಬೇತಿ ಮತ್ತು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಹಾಗೂ ಬೇರೆ ಇಲಾಖೆಗಳ ಸಿಬ್ಬಂದಿಗಳಿಗೆ ಮಾಸಿಕವಾರು ಪಟ್ಟಿಯನ್ವಯ ತರಬೇತಿ ನೀಡಲಾಗುತ್ತಿದೆ. ಈ ಮಹಾವಿದ್ಯಾಲಯವು 180 ರಿಂದ 200 ಸಿಬ್ಬಂದಿಗಳಿಗೆ ತರಬೇತಿ ನೀಡಲು ಸಾಕಾಗುವಷ್ಟು ವಸತಿ ಸೌಲಭ್ಯವನ್ನು ಹೊಂದಿರುತ್ತದೆ. ಇದಲ್ಲದೆ ಸಾಂಪ್ರದಾಯಕವಾದ ತರಬೇತಿ ಕಾರ್ಯಕ್ರಮಗಳಾದ ಫೈರ್ ಕಮಾಂಡೋ ಟ್ರೈನಿಂಗ್, ಸಿಮಿಲೇಟರ್‌ನೊಂದಿಗೆ ಬ್ರೀಥಿಂಗ್ ಅಪರೇಟಸ್ ಪ್ರಾಯೋಗಿಕ ಅಗ್ನಿಶಮನ ತರಬೇತಿ ನೀಡಲಾಗುತ್ತಿದೆ.

**SAFE (Students Association of Fire Education):** ಇದು ಮೂಲಭೂತವಾಗಿ ಶಾಲಾ ಕಾಲೇಜುಗಳಲ್ಲಿ ಅಗ್ನಿ ಅನಾಹುತಗಳ ನಿಯಂತ್ರಣಗಳ ಬಗ್ಗೆ ಅರಿವು ಮೂಡಿಸಲು ರೂಪಿಸಿದ ಒಂದು ಸಮರ್ಪಕ ಕಾರ್ಯಕ್ರಮವಾಗಿರುತ್ತದೆ. ಈ ಕಾರ್ಯರೂಪಕ್ಕೆ ಮಾಧ್ಯಮಿಕ ಮತ್ತು ಪ್ರೌಢಶಾಲಾ ಮಟ್ಟದ ಶಾಲೆಗಳನ್ನು ದತ್ತು ತೆಗೆದುಕೊಂಡು ಅಲ್ಲಿ ವಿದ್ಯಾರ್ಥಿಗಳಿಂದ ಶಾಲಾ ಫೈರ್ ಬ್ರೀಗೇಡ್‌ಗಳನ್ನು ಸೃಷ್ಟಿಸಲಾಗಿದೆ ಇವುಗಳ ನಿರ್ವಹಣಾ ಜವಾಬ್ದಾರಿಯನ್ನು ಆರ್.ಎ.ಮುಂಡ್ಕುರ್ ಅಗ್ನಿಶಾಮಕ ಮಹಾ ವಿದ್ಯಾಲಯದ ಅಧಿಕಾರಿಗಳಿಗೆ ವಹಿಸಲಾಗಿದೆ.

**ಅರಿವು ಮೂಡಿಸುವ ಕಾರ್ಯಕ್ರಮಗಳು**: ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲು ಅಂಕಲ್ ಡ್ಯಾಸ್ & ಬೇಬಿ ಫಾಮ್ ಎಂಬ ಹಾಸ್ಯ ಚಿತ್ರದ ಪುಸ್ತಕವನ್ನು ಸೃಷ್ಟಿಸಲಾಗಿದೆ. ಇದು ಒಂದು ಅಗ್ನಿ ಅನಾಹುತದ ನಿಯಂತ್ರಣದ ಬಗ್ಗೆ ಸಮಗ್ರವಾದ ವಿವರಣೆ ಹೊಂದಿರುವ ಪುಸ್ತಕವಾಗಿರುತ್ತದೆ. ಇದಲ್ಲದೆ ಅಗ್ನಿ ನಿಯಂತ್ರಣ ಮತ್ತು ಅಪಘಾತದಿಂದ ಹೊರ ಬರುವ ಪದ್ಧತಿಗಳ ವಿವರವನ್ನು ಹೊಂದಿರುವ ಕರ ಪತ್ರಗಳನ್ನು ಮುದ್ರಿಸಿ ಇಲಾಖೆಯಿಂದ ಸಾರ್ವಜನಿಕರಿಗೆ ವಿತರಿಸಲಾಗಿದೆ. ಪ್ರತಿ ವರ್ಷ ಏಪ್ರಿಲ್-14 ರಿಂದ 20 ರವರೆಗೆ ಅಗ್ನಿಶಾಮಕ ಸೇವಾ ಸಪ್ತಾಹ ಆಚರಿಸಲಾಗುತ್ತಿದೆ. ಈ ಸಂಬಂಧ ರಾಜ್ಯದ ಎಲ್ಲೆಡೆ ಏಪ್ರಿಲ್ ತಿಂಗಳಲ್ಲಿ ಅಗ್ನಿ ಅನಾಹುತಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಕಾರ್ಯ ಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

**ಅಂತರ್ಜಾಲ ಸ್ಥಾನ(ವೆಬ್ ಸೈಟ್):** ಈ ಇಲಾಖೆಯ ಎಲ್ಲಾ ವಿವರಗಳನ್ನು ಅಂತರಜಾಲ ಸ್ಥಾನವಾದ karunadu.gov.in/ksfes ರಲ್ಲಿ ಹಾಕಲಾಗಿದೆ. ಹೊಸ ಅಂತರ್ಜಾಲ ಸ್ಥಾನವನ್ನು ಇ-ಆಡಳಿತ ಇಲಾಖೆ ಸೇರಿ ತಯಾರಿಸಿ ಇದನ್ನು ಸಾಮಾನ್ಯ ಜನರಿಗೆ ಲಭ್ಯವಾಗುವಂತೆ ಮಾಡಲಾಗಿದೆ.

**ಬ್ಲಾಗ್ ಮತ್ತು ಮಿಡಿಯಾ ವಾಚ್**: ಈ ಇಲಾಖೆಯಲ್ಲಿ Blog.ksfes.gov.in ಎಂಬ ಬ್ಲಾಗ್‌ನ್ನು ನಿರ್ವಹಿಸಲಾಗುತ್ತಿದೆ ಮತ್ತು ಸಾರ್ವಜನಿಕರಿಗೆ, ಮಾಧ್ಯಮದವರಿಗೆ ಬೇರೆ ಇಲಾಖೆಯೊಂದಿಗೆ ಮಾಹಿತಿ ಹಂಚಿಕೊಳ್ಳುವುದಕ್ಕೋಸ್ಕರ media watch.ksfes.gov.in ಎಂಬ ಅಂತರ್ಜಾಲ ಸ್ಥಾನವನ್ನು ಹೊಂದಿದೆ. ಇದನ್ನು ಸಾರ್ವಜನಿಕರೊಂದಿಗೆ ಸಂವಹನ ಮಾಧ್ಯಮವಾಗಿ ಬಳಸಲು ಮತ್ತು ಅವರಿಂದ ಅನಿಸಿಕೆಗಳನ್ನು ಪಡೆಯಲು ಅನುಕೂಲವಾಗುವಂತೆ ರೂಪಿಸಲಾಗಿದೆ. Media watch ಬ್ಲಾಗ್‌ನಲ್ಲಿ ಇಲಾಖೆಯ ಆಗುಹೋಗುಗಳ ಘಟನೆಗಳ ಮಾಹಿತಿಗಳನ್ನು ಅದರಲ್ಲಿ ಅಪ್‌ಡೇಟ್ ಮಾಡಲಾಗುತ್ತಿದೆ.

**ಅಗ್ನಿಶಾಮಕ ತುರ್ತು ಸೇವಾ ಇಲಾಖೆಯ ಕಾರ್ಯಾಗಾರ:**

ಇಲಾಖೆಯ ವಾಹನಗಳನ್ನು ಮತ್ತು ರೇಚಕ ಯಂತ್ರಗಳನ್ನು ದುರಸ್ಥಿ ಪಡಿಸಲು ಒಂದು ಸುಸರ್ಜಿತವಾದ ಕಾರ್ಯಾಗಾರವನ್ನು ಬನ್ನೆರುಘಟ್ಟ ರಸ್ತೆಯಲ್ಲಿ ಸ್ಥಾಪಿಸಲಾಗಿದೆ. ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿಯವರು ಮೇಲ್ವಿಚಾರಣೆಯಲ್ಲಿ ನುರಿತ ಮೆಕಾನಿಕ್ಸ್ ರವರು ಪ್ರತಿ ನಿತ್ಯ ಬರುವ ಸಮಸ್ಯೆಗಳ ಮತ್ತು ವಾಹನಗಳ ನಿರ್ವಹಣೆಯನ್ನು ಮಾಡುತ್ತಾರೆ. ದೊಡ್ಡ ಮಟ್ಟದ ದುರಸ್ಥಿಗಳನ್ನು ಹೊರಗಡೆಯ ಅಧಿಕೃತ ಪ್ರಾಧಿಕಾರ ಹೊಂದಿದ ಡೀಲರ್ಸ್ ಅಥವಾ ಗ್ಯಾರೇಜ್‌ಗಳಲ್ಲಿ ಮಾಡಿಸಲಾಗುತ್ತದೆ. ಕಾರ್ಯಾಗಾರದ ಸಿಬ್ಬಂದಿಗಳನ್ನು ರಾಜ್ಯದ ಬೇರೆ ಬೇರೆ ಅಗ್ನಿಶಾಮಕ ಠಾಣೆಗಳಲ್ಲಿರುವ ಪಂಪು ಮತ್ತು ಪಿ.ಟಿ.ಓಗಳನ್ನು ದುರಸ್ಥಿ ಮಾಡಲು ಕಳುಹಿಸಿಕೊಡಲಾಗುತ್ತದೆ.

**ಅಗ್ನಿಶಾಮಕ ತುರ್ತು ಸೇವಾ ಇಲಾಖೆಯ ನಿಸ್ತಂತು ಕಾರ್ಯಕ್ರಮ:**

ಇಲಾಖೆಯ ದೂರವಾಣಿ ಮತ್ತು ನಿಸ್ತಂತು ಸಂಪರ್ಕ ಜಾಲವನ್ನು ಹೊಂದಿದೆ. ಈ ಎರಡು ಸಂಪರ್ಕ ಜಾಲವನ್ನು ಪೊಲೀಸ್ ಇನ್ಸ್‌ಪೆಕ್ಟರ್, ಪೊಲೀಸ್ ನಿಸ್ತಂತು ವಿಭಾಗದಿಂದ ನಿಯೋಜನೆಗೊಂಡ ಪೊಲೀಸ್ ಇನ್ಸ್‌ಪೆಕ್ಟರ್ ಅಧಿಕಾರಿಯವರ ಸಂಪರ್ಕ ವ್ಯವಸ್ಥೆಯು ಎರಡು ಬ್ಯಾಂಡ್‌ಗಳಲ್ಲಿ ಕರ್ತವ್ಯ ನಿರ್ವಹಿಸುತ್ತದೆ.

**ಕೇಂದ್ರ ಅಗ್ನಿ ನಿಯಂತ್ರಣ ಕೊಠಡಿ:**

ಆಧುನಿಕ ಕೇಂದ್ರ ಅಗ್ನಿನಿಯಂತ್ರಣ ಕೊಠಡಿಯು ಬೆಂಗಳೂರು ನಗರದ ಶೇಷಾದ್ರಿ ರಸ್ತೆಯಲ್ಲಿರುವ ಹೈಗ್ರೌಂಡ್ ಅಗ್ನಿಶಾಮಕ ಠಾಣೆಯ ಆವರಣದಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ದಿನಾಂಕ:15.08.2013 ರಿಂದ ಸ್ಟೇಟ್ ಕಂಟ್ರೋಲ್ ರೂಮ್ ಅನ್ನು ಹಾಲಿ ಇರುವ ಕೇಂದ್ರ ಅಗ್ನಿ ನಿಯಂತ್ರಣದ ಆವರಣದಲ್ಲಿ ಪ್ರಾರಂಭಿಸಿದ್ದು, ಇದು ರಾಜ್ಯದಲ್ಲಿ ಸಂಭವಿಸುವ ಅಗ್ನಿ ಕರೆಗಳ ವಿವರಗಳನ್ನು ಸಂಗ್ರಹಿಸಿ ಮೇಲಾಧಿಕಾರಿಗಳ ಗಮನಕ್ಕೆ ತರುತ್ತದೆ.

**ಬಹುಮಹಡಿ ಕಟ್ಟಡಗಳ ಬಗ್ಗೆ ತಂತ್ರಾಂಶ ಅಳವಡಿಕೆ:**

ಸಾರ್ವಜನಿಕರಿಗೆ ಬಹುಮಹಡಿ ಕಟ್ಟಡಗಳ ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡುವ ಸಂಬಂಧ ಒಂದು ಹೊಸ ತಂತ್ರಾಂಶವನ್ನು ತಯಾರಿಸಿ ಇಲಾಖೆಯ ವೆಬ್ ಸೈಟ್ http://www.mrc.gov.in /ksfes ಗೆ ಅಳವಡಿಸಿ ಕಾರ್ಯರೂಪಕ್ಕೆ ತರಲಾಗಿದೆ.

**ಬಲಾಬಲ (31-03-2017 ರಂತೆ)**

| ಕ್ರ. ಸಂ | ಕಛೇರಿ | ಮಂಜೂರಾದ ಹುದ್ದೆಗಳು | ಹಾಲಿ ಇರುವ ಹುದ್ದೆಗಳು | ಖಾಲಿ ಹುದ್ದೆಗಳು |
|---|---|---|---|---|
| 1 | ಪ್ರಧಾನ ಕಚೇರಿ | 61 | 42 | 19 |
| 2 | ಅಗ್ನಿಶಾಮಕ ಮತ್ತು ತುರ್ತು ಸೇವಾ ಅಕಾಡೆಮಿ | 45 | 31 | 14 |
| 3 | ಅಗ್ನಿಶಾಮಕ ಕಾರ್ಯಗಾರ | 22 | 12 | 10 |
| 4 | ನಿಸ್ತಂತು ಕಾರ್ಯಗಾರ | 11 | 03 | 08 |
| 5 | ಅಗ್ನಿಶಾಮಕ ಠಾಣೆಗಳು | 6793 | 4825 | 1968 |
| 6 | ಪ್ರಾರಂಭವಾಗಬೇಕಾಗಿರುವ ಅಗ್ನಿಶಾಮಕ ಠಾಣೆ | 24 | 02 | 22 |
| 7 | ಶೋಧನೆ ಮತ್ತು ರಕ್ಷಣಾ ಘಟಕ | 17 | 04 | 13 |
| 8 | ತುರ್ತು ವೈದ್ಯಕೀಯ ಸೇವೆಗಳು | 28 | 08 | 20 |
| | **ಒಟ್ಟು :-** | **7001** | **4927** | **2074** |

01-04-2016 ರಿಂದ 31-03-2017 ರವರೆಗೆ ರಾಜ್ಯಾದ್ಯಂತ 20772 ಅಗ್ನಿಕರೆಗಳಿಗೆ ಹಾಗೂ 1770 ರಕ್ಷಣಾ ಕರೆಗಳಿಗೆ ಸ್ಪಂದಿಸಿ, ಅಗ್ನಿ ದುರಂತದಲ್ಲಿ ಸಿಲುಕಿದ ಒಟ್ಟು ರೂ.1238 ಕೋಟಿ ಮೌಲ್ಯದ ಆಸ್ತಿ-ಪಾಸ್ತಿ ಪೈಕಿ ರೂ.696 ಕೋಟಿ ಮೌಲ್ಯದ ಆಸ್ತಿ-ಪಾಸ್ತಿಯನ್ನು ಸಂರಕ್ಷಿಸಿರುತ್ತಾರೆ. ಅಗ್ನಿ ದುರಂತ ಹಾಗೂ ಇತರೆ ತೀವ್ರ ಸ್ವರೂಪದ ಅನಾಹುತಗಳಲ್ಲಿ ಸಿಲುಕಿದ 952 ಜನರ ಪ್ರಾಣ ರಕ್ಷಣೆ ಮಾಡಲಾಗಿದೆ. ಅಲ್ಲದೇ ರಾಜ್ಯಾದ್ಯಂತ ಸಾರ್ವಜನಿಕರಲ್ಲಿ ಅಗ್ನಿ ನಿವಾರಣೆ ಹಾಗೂ ಅಗ್ನಿಶಮನದ ಬಗ್ಗೆ ತಿಳುವಳಿಕೆ ನೀಡಲು ಒಟ್ಟು 109 ಸ್ಥಳಗಳಲ್ಲಿ ಅಣುಕು ಪ್ರದರ್ಶನ ಹಾಗೂ 3651 ಸ್ಥಳಗಳಲ್ಲಿ ಅಗ್ನಿನಿಯಂತ್ರಣದ ಬಗ್ಗೆ ಉಪನ್ಯಾಸ ಮತ್ತು ಪ್ರದರ್ಶನಗಳನ್ನು ವ್ಯವಸ್ಥೆ ಮಾಡಲಾಗಿದೆ.

**ಲೆಕ್ಕ ಪರಿಶೋಧನೆಗೆ ಸಂಬಂದಪಟ್ಟ ಕಾರ್ಯಭಾರ ಹಾಗೂ ಕಾರ್ಯ ನಿರ್ವಹಣೆ:**

2015-16 ನೇ ಸಾಲಿನ ಲೆಕ್ಕ ಪರಿಶೋಧನ ಕಾರ್ಯ ನಡೆದಿದ್ದು, ಮಹಾಲೇಖಪಾಲಕರ ಕಚೇರಿಯಿಂದ ಆಕ್ಷೇಪಣೆಗಳ ಪತ್ರ ಇತ್ತೀಚೆಗೆ ಸ್ವೀಕೃತವಾಗಿದ್ದು, ಆಕ್ಷೇಪಣೆಗಳಿಗೆ ಉತ್ತರವನ್ನು ಸಲ್ಲಿಸಲಾಗುವುದು ಹಾಗೂ 2016-17ನೇ ಸಾಲಿನ ಲೆಕ್ಕ ಪರಿಶೋಧನ ಕಾರ್ಯ ಮಹಾಲೇಖಪಾಲಕರ ಕಚೇರಿಯಿಂದ ನಡೆಸಬೇಕಾಗಿದೆ.

ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳ ಆದರ್ಶ ಸಾಧನೆಗಳನ್ನು ಗುರುತಿಸಿ, ಮಾನ್ಯ ಮುಖ್ಯ ಮಂತ್ರಿಯವರ ಚಿನ್ನದ ಪದಕ ಮತ್ತು ಘನತೆವೆತ್ತ ರಾಷ್ಟ್ರಪತಿಗಳ ವಿಶಿಷ್ಟ ಸೇವಾ ಪದಕ ಹಾಗೂ ಶ್ಲಾಘನೀಯ ಸೇವಾ ಪದಕಗಳನ್ನು ಪುರಸ್ಕರಿಸಲಾಗಿದೆ. ಪದಕಗಳನ್ನು ಪುರಸ್ಕರಿಸಿರುವ ವಿವರ ಈ ಕೆಳಗಿನಂತಿವೆ:

| ಕ್ರ.ಸಂ. | ಪದಕಗಳನ್ನು ಪುರಸ್ಕರಿಸಿದ ವರ್ಷ | ಪದಕಗಳ ಮಾದರಿ | ಪುರಸ್ಕೃತ ಸಿಬ್ಬಂದಿಗಳ ಸಂಖ್ಯೆ |
|---|---|---|---|
| 01 | 2014 | ಅ. ಘನತೆವೆತ್ತ ರಾಷ್ಟ್ರಪತಿಯವರ ಶ್ಲಾಘನೀಯ ಸೇವಾ ಪದಕ<br>ಆ. ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ಘನತೆವೆತ್ತ ರಾಷ್ಟ್ರಪತಿಯವರ ಶ್ಲಾಘನೀಯ ಸೇವಾ ಪದಕ<br>ಇ. ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ಘನತೆವೆತ್ತ ರಾಷ್ಟ್ರಪತಿಯವರ ವಿಶಿಷ್ಟ ಸೇವಾ ಪದಕ<br>ಈ. ಮಾನ್ಯ ಮುಖ್ಯಮಂತ್ರಿಯವರ ಚಿನ್ನದ ಪದಕ | ಅ. 02 ಸಂಖ್ಯೆ<br>ಆ. 04 ಸಂಖ್ಯೆ<br>ಇ. 01 ಸಂಖ್ಯೆ<br>ಈ.44 ಸಂಖ್ಯೆ |
| 02 | 2015 | ಅ. ಗಣರಾಜ್ಯೋತ್ಸವ ಸಂದರ್ಭದಲ್ಲಿ ಘನತೆವೆತ್ತ ರಾಷ್ಟ್ರಪತಿಯವರ ಶ್ಲಾಘನೀಯ ಸೇವಾ ಪದಕ<br>ಆ. ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ಘನತೆವೆತ್ತ ರಾಷ್ಟ್ರಪತಿಯವರ ಶ್ಲಾಘನೀಯ ಸೇವಾ ಪದಕ<br>ಇ. ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ಘನತೆವೆತ್ತ ರಾಷ್ಟ್ರಪತಿಯವರ ವಿಶಿಷ್ಟ ಸೇವಾ ಪದಕ<br>ಈ. ಮಾನ್ಯ ಮುಖ್ಯಮಂತ್ರಿಯವರ ಚಿನ್ನದ ಪದಕ | ಅ. 04<br>ಆ. 04 ಸಂಖ್ಯೆ<br>ಇ. 01 ಸಂಖ್ಯೆ<br>ಈ.43 ಸಂಖ್ಯೆ |
| 03 | 2016 | ಅ. ಗಣರಾಜ್ಯೋತ್ಸವ ಸಂದರ್ಭದಲ್ಲಿ ಘನತೆವೆತ್ತ ರಾಷ್ಟ್ರಪತಿಯವರ ಶ್ಲಾಘನೀಯ ಸೇವಾ ಪದಕ<br>ಆ. ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ಘನತೆವೆತ್ತ ರಾಷ್ಟ್ರಪತಿಯವರ ಶ್ಲಾಘನೀಯ ಸೇವಾ ಪದಕ<br>ಇ. ಮಾನ್ಯ ಮುಖ್ಯ ಮಂತ್ರಿಯವರ ಚಿನ್ನದ ಪದಕ | ಅ. 05 ಸಂಖ್ಯೆ<br>ಆ. 03 ಸಂಖ್ಯೆ<br>ಇ. 21 ಸಂಖ್ಯೆ |
| 04 | 2017 | ಅ. ಗಣರಾಜ್ಯೋತ್ಸವ ಸಂದರ್ಭದಲ್ಲಿ ಘನತೆವೆತ್ತ ರಾಷ್ಟ್ರಪತಿಯವರ ವಿಶಿಷ್ಟ ಸೇವಾ ಪದಕ<br>ಆ. ಗಣರಾಜ್ಯೋತ್ಸವ ಸಂದರ್ಭದಲ್ಲಿ ಘನತೆವೆತ್ತ ರಾಷ್ಟ್ರಪತಿಯವರ ಶ್ಲಾಘನೀಯ ಸೇವಾ ಪದಕ | ಅ. 01 ಸಂಖ್ಯೆ<br>ಆ. 04 ಸಂಖ್ಯೆ |

**ವಾಹನ ಮತ್ತು ಉಪಕರಣ (ದಿನಾಂಕ 31-03-2017 ರಲ್ಲಿದ್ದಂತೆ)**

| ಕ್ರಮ ಸಂಖ್ಯೆ | ವಾಹನಗಳ ಮಾದರಿ | ಲಭ್ಯವಿರುವ ವಾಹನ | ಕವಚ ನಿರ್ಮಾಣ ಹಂತದಲ್ಲಿರುವ ವಾಹನ | ಟೆಂಡರ ಪ್ರಕ್ರಿಯೆಯಲ್ಲಿರುವ ವಾಹನಗಳು |
|---|---|---|---|---|
| 01 | 4500 ಲೀಟರ್ ನೀರಿನ ಸಾಮರ್ಥ್ಯವುಳ್ಳ ಜಲವಾಹನ | 406 | 22 | 22- ಜಲವಾಹನಗಳ ಕವಚ ನಿರ್ಮಾಣ<br>04-ಜಲವಾಹನಗಳ ಮರು ಕವಚ ನಿರ್ಮಾಣ<br>10-ಜಲವಾಹನಗಳ ಖರೀದಿ |
| 02 | 9000 ಲೀಟರ್ ಸಾಮರ್ಥ್ಯವುಳ್ಳ ವಾಟರ್ ಲಾರಿ | 40 | -- | -- |
| 03 | 16,000 ಲೀಟರ್ ನೀರಿನ ಸಾಮರ್ಥ್ಯವುಳ್ಳ ವಾಟರ್ ಬೌಜರ್ | 35 | -- | -- |
| 04 | ಫೋಮ್ ಟೆಂಡರ್ | 02 | -- | -- |
| 05 | ಏಣಿ ವಾಹನ | 55 | -- | -- |
| 06 | ರಕ್ಷಣಾ ವಾಹನಗಳು | 27 | -- | --- |
| 07 | 37ಮೀ ಟಿ.ಟಿ.ಎಲ್ ವಾಹನ<br>ಹೈಡ್ರಾಲಿಕ್ ಪ್ಲಾಟ್ ಫಾರ್ಮ್ ವಾಹನ<br>30ಮೀ, 32ಮೀ ಮತ್ತು 54ಮೀ ಎತ್ತರ ತಲುಪಬಲ್ಲ ಎ.ಎಲ್.ಪಿ ವಾಹನಗಳು | 01<br>01<br>04 | -- | -- |
| 08 | ಪೋರ್ಟಬಲ್ ಪಂಪ್ | 328 | -- | -- |
| 09 | ಹೈ ಪ್ರಶರ್ ಪಂಪ್ | 60 | -- | -- |
| 10 | ವರುಣ-ವಾಟರ್ ಮಿಸ್ಟ್ ಟೆಕ್ನಾಲಜಿ | 06 | -- | -- |
| 11 | ಅಗ್ನಿ-ವಾಟರ್ ಮಿಸ್ಟ್ ಟೆಕ್ನಾಲಜಿ | 121 | -- | -- |
| 12 | ಉಪಯುಕ್ತ ವಾಹನಗಳು | 256 | -- | -- |
| 13 | ಜನರೇಟರ್ | 162 | -- | -- |
| 14 | ಇನ್ಫ್ಲಾಟಬಲ್ ಲೈಟ್ಸ್ | 236 | -- | -- |
| 15 | ಕ್ವಿಕ್ ರೆಸ್ಪಾನ್ಸ್ ವಾಹನಗಳು | 27 | -- | -- |
| 16 | ಇನ್ಫ್ಲಾಟಬಲ್ ಬೋಟ್ಸ್ (with Obm) | 45 | -- | -- |
| 17 | ಬಿ.ಎ.ವ್ಯಾನ್ | 01 | -- | -- |

**ಅಗ್ನಿಶಾಮಕ ಠಾಣೆ ಕಟ್ಟಡಗಳು (ಪ್ರಾರಂಭವಾಗಿರುವ ಠಾಣೆಗಳು) ವಿವರ**

| ಖಾಯಂ ಅಗ್ನಿಶಾಮಕ ಠಾಣಾ ಕಟ್ಟಡಗಳು | ತಾತ್ಕಾಲಿಕ ಅಗ್ನಿಶಾಮಕ ಠಾಣೆ ಕಟ್ಟಡಗಳು | ಬಾಡಿಗೆ ಕಟ್ಟಡಗಳು | ನಿರ್ಮಾಣ ಹಂತದಲ್ಲಿರುವ ಅಗ್ನಿಶಾಮಕ ಠಾಣೆ ಕಟ್ಟಡಗಳು |
|---|---|---|---|
| 173 | 15 | 07 | 17 |

**ವಸತಿ ಗೃಹಗಳು**

| 212 ಅಗ್ನಿಶಾಮಕ ಠಾಣೆಗಳಿಗೆ ಲಭ್ಯವಿರುವ ವಸತಿ ಗೃಹಗಳು | ಲೋಕೋಪಯೋಗಿ ಇಲಾಖೆ ವತಿಯಿಂದ ನಿರ್ಮಾಣಗೊಳ್ಳುತ್ತಿರುವ ವಸತಿ ಗೃಹಗಳು | ಕೆಎಸ್‌ಪಿಹೆಚ್‌ಸಿ ವತಿಯಿಂದ ಕರ್ನಾಟಕದ ವಿವಿಧ ಸ್ಥಳಗಳಲ್ಲಿ ನಿರ್ಮಾಣಗೊಳ್ಳುತ್ತಿರುವ ವಸತಿ ಗೃಹಗಳು | ಶೇಖಡವಾರು ಲಭ್ಯವಿರುವ ವಸತಿ ಗೃಹಗಳು |
|---|---|---|---|
| 2509 | 0 | 232 | 39.15% |